Clauses 2 and 3.

MADAM SPEAKER.— Since there are no amendments I will put the clauses 2 and 3 to vote of the House. The question is.—

"That clauses 2 and 3 do stand part of the Bill."

The motion was adopted

"Clauses 2 and 3 were added to the Bill"

Clause 1 etc.

MADAM SPEAKER.— The question is.—

"That clause 1 the long Title, preamble and the Enacting Formula do stand part fo the Bill."

The motion was adopted.

(Claues 1 Long Title, the Preamble and the Enacting Formula were added to the Bill).

Motion to pass

SRI H. C. SRIKANTIAH. — I move.—

"That the Karnataka Electricity Supply Undertakings (Acquisition) (Amendment) Bill, 1976, be passed."

MADAM SPEAKER.— The question is.—

"That the Karnataka Electrcity Supply Undertakings (Acquisition) (Amendment) Bill, 1976 be passed."

The motion was adopted and the Bill was passed.

THE KARNATAKA MOTOR VEHICLES (TAXATION ON PASSENGERS AND GOODS) (AMENDMENT) BILL 1976.

SRI M. MOHAMMED ALI (Minister for Transport and Tourism).— I move.—

"That the Karnataka Motor Vehicles (Taxation on Passengers and Goods) (Amendment) Bill, 1976, be taken into consideration."

MADAM SPEAKER,— Motion moved·—

"That Karnataka Motor Vehicles (Taxation on Passengers and Goods) (Amendment) Bill, 1976 be taken into consideration."

SRI MOHAMMED ALI,— This is a very simple Bill. The object of the Bill is to insert a new section 14(B) in the Karnataka Motor Vehicles (Taxation on Passengers and Goods) Act 1961 to enable the Government to exempt or reduce the tax payable under the Act. Already there is one section 16 of the Karnataka Motor Vehicles Taxation Act wherein there is an enabling clause. This question of empowering the Government to exempt is necessitated because the Government of India is farmulating a number of schemes for Inter- State and All-India permits. For instance they have formulated a scheme for the State to grant permit for 100 tourist motor cabs and tourist omnibuses with passenger capacity not exceeding 29 and tourist ominibuses with passenger capality exceeding 29, In the meanwhile the Government of India is also envisaging for grant of 250 all-India permits for goods carriage.

It will not be possible for them to operate all over the country by paying the tax of all the States Hence the tax exemption and reduction is necessary, There an Ordinace has bear promulgated in order to see that this national permits are granted as early as possible. Since it is one of the 20 point Economic Programme, I do not think this legislative measure will be opposed even by the members of the Opposition.

2-00 P.M.

† ಶ್ರೀ ಟಿ. ಆರ್. ಶಾಮಣ್ಣ (ಪೊಲ್ಟ್).—ಮಾನ್ಯ ಸಭಾಧ್ಯಕ್ಷಣಿಯವರೇ, ಈ ಮಸೂದೆಯನ್ನು ವಿರೋಧಿಸತಕ್ಕ ಸಂದರ್ಭವೇನೂ ನನಗೆ ಈಗ ಕಾಣಲಿಲ್ಲ.

ಅಧ್ಯಕ್ಷರು.—ಮತ್ತೇಕೆ ಮಾತನಾಡುತ್ತೀರಿ? ಆದರೂ ಮಾತಡಬೇಕೆಂಬ ಆಸೆ . . . .

ಶ್ರೀ ಟಿ. ಆರ್. ಶಾಮಣ್ಣ.—ಆದರೆ ಕೆಲವು ವಿಚಾರಗಳನ್ನು ಮಂತ್ರಿಗಳ ಗಮನಕ್ಕೆ ತರಬೇಕಾಗಿದೆ. ಅವುಗಳ ಬಗ್ಗೆ ಕೆಲವು ವಿವರಣೆಗಳನ್ನು ಮಂತ್ರಿಗಳು ಕೊಟ್ಟರೆ ಬಹಳ ಒಳ್ಳೆಯದು ಬೇರೆ ರಾಜ್ಯಗಳಲ್ಲಿ ನಮ್ಮ ರಾಜ್ಯಕ್ಕಿಂತಲೂ ಹೆಚ್ಚಿನ ಸಾಲಭ್ಯಗಳನ್ನು ಈಗಾಗಲೇ ಕೊಡಲಾಗಿದೆ. ಕೆಲವು ಸಂದರ್ಭಗಳಲ್ಲಿ ನಮ್ಮ ರಾಜ್ಯದಿಂದ ಬೇರೆ ರಾಜ್ಯಗಳಿಗೆ ಹೋಗುವಾಗ ಇಲ್ಲಿಂದ ಹೋಗತಕ್ಕ ಬಸ್ಸುಗಳಿಗೆ ಅಲ್ಲಿ ಹೆಚ್ಚಿನ ಸಾಲಭ್ಯಗಳು ದೊರೆಯುತ್ತವೆ. ಈಗ ಟೂರಿಸ್ಟ್ ಬಸ್ಸುಗಳನ್ನು ನೀವು ರಾಷ್ಟ್ರೀಕರಣ ಮಾಡಿದಮೇಲೆ ಕೆಲವರಿಗೆ ತುಂಬಾ ಕಷ್ಟವಾಗಿದೆ. ಜೆನ್ಯೂಯಿನಾಗಿ ಪ್ರವಾಸ ಮಾಡಬೇಕಾದಂಥ ಸಂದರ್ಭಗಳೂ ಸಹ ಅನೇಕವಿರುತ್ತವೆ. ಆ ರೀತಿ ಪ್ರವಾಸಮಾಡುವವರಿಗೆ ಇದರಿಂದ ಬಹಳ ತೊಂದರೆಯಾಗಿದೆ. ಹಿಂದೆ ಆ ರೀತಿ ಪ್ರಾವಸ ಹೋಗುವವರನ್ನು ಕರೆದುಕೊಂಡು ಹೋಗುವವರು ಮೊದಲು ಲಗ್ಜುರಿ ಬಸ್‌ಗಳನ್ನು ದುರುಪಯೋಗ ಪಡಿಸಿಕೊಂಡು ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸುಗಳ ಬಗ್ಗೆ ಒಂದು ರೀತಿಯಾಗಿ ಪ್ರೊಪೋಟ ಮಾಡುತ್ತಿದ್ದರು. ಅದನ್ನು ಸರ್ಕಾರದವರು ತುಂಬಾ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದರೂ ಅನೇಕ ಸಂದರ್ಭಗಳಲ್ಲಿ ಇದರಿಂದ ಇರಾಜೆಗೆ ತುಂಬಾ ತೊಂದರೆಯಾಗಿತ್ತು. ಜನರಿಗೂ ಹಾಗೂ ಪ್ರವಾಸಿಗರಿಗೂ ಬಹಳವಾಗಿ ತೊಂದರೆಯಾಗುತ್ತಿತ್ತು. ಆದ್ದರಿಂದ ಈಗ ನಾನು ಒಂದು ವಿಚಾರವನ್ನು ಮಾನ್ಯ ಮಂತ್ರಿಗಳನ್ನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಈಗ ಜೆನ್ಯೂಯಿನಾಗಿ ಪ್ರವಾಸ ಮಾಡತಕ್ಕವರು ಟೂರಿಸ್ಟ್ ಬಸ್‌ಗಳನ್ನು ಅವಲಂಬಿಸಲೇ ಬೇಕಾಗುತ್ತದೆ. ಪ್ರವಾಸಿಗರ ಅನುಕೂಲಕ್ಕಾಗಿಯಾದರೂ ಅಂತಹ ಸಂದರ್ಭಗಳಲ್ಲಿ ಅವು ಹೋಗಲೇ ಬೇಕಾಗುತ್ತದೆ. ಆದ್ದರಿಂದ ಅಂತಹ ಪ್ರವಾಸಿಗರಿಗಾದರೂ ಕೆಲವಾರು ಟೂರಿಸ್ಟ್ ಬಸ್‌ಗಳನ್ನು ಈಗ ಬಿಡಗಿಸಿ

ಕೊಡುತ್ತಾರೋ ಇಲ್ಲವೋ ಎಂಬುದನ್ನು ಮಾನ್ಯ ಮಂತ್ರಿಗಳು ನನಗೆ ತಿಳಿಸಬೇಕು. ಇಂತಹ ಒಂದು ರಿಯಾಯಿತಿಯಿಂದ ಸರ್ಕಾರಕ್ಕೆ ಎಷ್ಟು ಹಣ ಖೋತಾ ಆಗುತ್ತದೆಂದು ಒಂದು ಹೇಳಿಕೆಯನ್ನು ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ಕೊಟ್ಟಿದ್ದರೆ ಬಹಳ ಚೆನ್ನಾಗಿತ್ತು. ಇದರಿಂದ ಇಷ್ಟು ವರಮಾನ ಕಡಿಮೆಯಾಗಿತ್ತದೆಂದು ನಿಖರವಾಗಿ ಇದರಲ್ಲಿ ಹೇಳಿದ್ದರೆ ಬಹಳ ಚೆನ್ನಾಗಿತ್ತು. ಇದರಲ್ಲಿ ಮುಂದೆ ಕಾಣಿಸಿರುವ ಹಾಗೆ ಪರ್ಮಿಟ್‌ಗಳನ್ನು ಕೊಡುವುದಕ್ಕೆ ಸ್ಟೇಟ್ ಟ್ರಾನ್ಸ್‌ಪೋರ್ಟ್ ಅಥಾರಿಟಿಯವರಿಗೆ ಆರ್ಡರ್ಸ್ ಮಾಡಿದಾರೆಂದು ಕಾಣಿಸಿದೆ. ಅವು ಯಾವುವೆಂದರೆ :—

1.	Tourist Motor Cabs	...	...	100
2.	Tourist omnibuses with passenger capacity not exceeding 29	...	...	15
3.	Tourist omnibuses with passanger capacity exceeding 29	...	...	10

ಹೀಗೆ ಇರುವಾಗ ಸಣ್ಣ ವಾಹನಗಳಿಗೂ ಅನುಸಾರವಾಗಿ ಪರ್ಮಿಟ್‌ಗಳನ್ನು ಕೊಡುವಾಗ ಜೆನ್ಯೂಯಿನ್ ಕೇಸುಗಳಲ್ಲಿ ದೊಡ್ಡ ದೊಡ್ಡ ವಾಹನಗಳಿಗೂ ಪರ್ಮಿಟ್ ಕೊಟ್ಟರೆ ಒಳ್ಳೆಯದಾಗುತ್ತದೆ. ಏಕೆಂದರೆ ಕೆಲವರು ಯಾತ್ರೆಗಳಿಗೆ ಹೋಗುತ್ತಾರೆ. ಮದುವೆಗಳಿಗೆ ಹೋಗುತ್ತಾರೆ. ಅಂತಹವರಿಗೆ ಅವಕಾಶ ಕೊಡಬೇಕು. ಅದೂ ಅಲ್ಲದೆ ರಾಷಾಸ್ಟಾನದಿಂದ, ಮಧ್ಯದೇಶಗಳಿಂದಲೂ ಇನ್ನೂ ಅನೇಕ ಕಡೆಗಳಿಂದಲೂ ಬಸ್ಸುಗಳು ಈಗ ಬರುತ್ತಾ ಇವೆ. ಅಂಥಾದ್ದಕ್ಕೆ ಇದು ಅನ್ಯಾಯ ಗುತ್ತದೋ ಇಲ್ಲವೋ ಗೊತ್ತಿಲ್ಲ. ಇವರ ಬಗ್ಗೆ ಮಾನ್ಯ ಸಚಿವರು ಸ್ವಲ್ಪ ವಿವರಣೆ ಕೊಟ್ಟರೆ ಬಹಳ ಒಳ್ಳೆಯದು. ಪರದೇಶಗಳಿಂದಲೂ ಅನೇಕರು ಇಲ್ಲಿಗೆ ಬರುತ್ತಾರೆ. ನಮ್ಮಲ್ಲಿ ಅನೇಕರು ಪರದೇಶಗಳಿಗೆ ಹೋಗುತ್ತಾ ಇರುತ್ತಾರೆ. ಆದ್ದರಿಂದ ಕೆಲವು ಟೂರಿಸ್ಟ್ಸ್ ಬಸ್ಸುಗಳಿಗಾದರೂ ಪರ್ಮಿಟ್ ಕೊಟ್ಟರೆ ಅಂತಹ ಸನ್ನಿವೇಶಗಳಲ್ಲಿ ಜನರಿಗೆ ಸೌಲಭ್ಯ ದೊರಕುತ್ತದೆ. ಒಟ್ಟಿನಲ್ಲಿ ಈ ಮಸೂದೆ ಜನರಿಗೆ ಅನುಕೂಲ ಮಾಡತಕ್ಕ ಮಸೂದೆಯಾಗಿರುವುದರಿಂದ, ಹೆಚ್ಚಿಗೆ ಇದರ ಬಗ್ಗೆ ಮಾತನಾಡುವ ಅವಶ್ಯಕತೆ ಇಲ್ಲ. ನಾನು ಕೇಳಿದ ವಿವರಗಳನ್ನು ಮಾನ್ಯ ಸಚಿವರು ನನಗೆ ಒದಗಿಸಿಕೊಟ್ಟರೆ ಸಾಕು.

ಇಷ್ಟು ಹೇಳಿ, ಈ ಮಸೂದೆಗೆ ನನ್ನ ಪೂರ್ಣ ಬೆಂಬಲವನ್ನು ಕೊಟ್ಟು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್).— ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಸಚಿವರು ತಂದಿರಕ್ಕ ಮಸೂದೆಯನ್ನು ಸ್ವಾಗತಿಸುತ್ತೇನೆ. ಇವತ್ತಿನದಿವಸ ದೇಶದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವುದಕ್ಕೆ ಮತ್ತು ಅವರ ಅವಶ್ಯಕತೆಗಳನ್ನು ಪೂರೈಸುವುದಕ್ಕೂ ಒಂದು ರೀತಿಯಾದಂಥ ಅವಕಾಶವನ್ನು ಇಲ್ಲಿ ಕಲ್ಪಿಸಿ ಮೋಟಾರ್ ವಾಹನಗಳಿಗೆ ಸಂಬಂಧಪಟ್ಟಹಾಗೆ ಕೆಲವಾರು ರಿಯಾಯಿತಿಗಳನ್ನು ಈ ಮಸೂದೆಯಲ್ಲಿ ಅಡಕವಾಗಿರುವಹಾಗೆ ತೋರಿಸುವುದಕ್ಕೆ ಹೊರಟಿದ್ದಾರೆ. ಇದನ್ನು ಪ್ರವಾಸೋದ್ಯಮದ ದೃಷ್ಟಿಯಿಂದಲೂ, ನಮ್ಮ ದೇಶಕ್ಕೆ ಬರುತ್ತಾ ಇರತಕ್ಕ ಹೊರದೇಶಗಳ ಪ್ರಯಾಣಿಕರ ದೃಷ್ಟಿಯಿಂದಲೂ ಮತ್ತು ಫಾರಿನ್ ಎಕ್ಸ್‌ಚೇಂಜ್ ನಮ್ಮ ದೇಶಕ್ಕೆ ಹೆಚ್ಚಿಗೆ ಬರುವ ಹಾಗೆ ಮಾಡುವ ದೃಷ್ಟಿಯಿಂದಲೂ ಈ ಸಭೆಯಲ್ಲಿ ತಂದಿರುವುದು ಬಹಳ ಒಳ್ಳೆಯದಾಗಿದೆ. ಆ ಒಂದು ದೃಷ್ಟಿಯಿಂದ ಇದನ್ನು ಇಲ್ಲಿ ತಂದಿದ್ದಾರೆಂದು ನನಗೆ ಭಾನವಾಗುತ್ತಿದೆ. ಸರ್ಕಾರದವರು ಈ ಸದನದಲ್ಲಿ ಪೊದಲನಿಂದಲೂ ಮಾಡಿದಂಥ ಒಂದು ತೀವ್ರವಾದ ಒತ್ತಾಯದಮೇರೆ ಕಾಂಟ್ರಾಕ್ಟ್ ಕ್ಯಾರೇಜ್ ಬಸ್ಸುಗಳನ್ನು ಈಗ ಸರ್ಕಾರ ಮಹಿಸಿಕೊಂಡಿದೆ. ಅದ್ದರಿಂದ ನಾನು ಸರ್ಕಾರದವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ನಾವು ಈ ಸಭೆಯಲ್ಲಿ ಹಾಗೂ ಹೊರಗಡೆ ಪ್ರತೀಪದೇ ಕಾಂಟ್ರಾಕ್ಟ್ ಕ್ಯಾರೇಜ್‌ಗಳಿಂದ ಏನೇನು ಅನಾಹುತಗಳು ಆಗುತ್ತಿವೆ ಅವನ್ನು ಹೇಗಾದರೂ ಮಾಡಿ ತಪ್ಪಿಸಬೇಕೆಂದು ಹೇಳುತ್ತಲೇ ಇದ್ದೆವು. ಮಾನ್ಯ ಶ್ರೀ ಶಾಮಣ್ಣ ನವರು ಹೇಳಿದಹಾಗೆ ಹಿಂದೆ ಇದರ ಬಗ್ಗೆ ಅನೇಕ ರೀತಿಯಾದಂಥ ಆಶ್ವಾಸನೆಗಳನ್ನು

ಈ ಸಭೆಯಲ್ಲಿ ಕೊಟ್ಟಿರುವಹಾಗೆ ಈಗಲಾದರೂ ಒಂದು ದಿಟ್ಟ ತನದಿಂದಲಾದರೂ ಸರ್ಕಾರ ಇದರ ಬಗ್ಗೆ ಒಂದು ಹೆಜ್ಜೆಯನ್ನು ಇಟ್ಟಿದ್ದರೂ ಕೆಲವಾರು ಲೋಪದೋಷಗಳು ಇದ್ದೇ ಇವೆ. ಏಕೆಂದರೆ ನಮ್ಮಲ್ಲಿ ಸ್ಟೇಟ್ ಕ್ಯಾರೇಜಸ್ ಎಂಬುದಾಗಿ ಏನಿವೆಯೋ ಅವನ್ನು ಇನ್ನೂ ಸರ್ಕಾರದವರು ರಾಷ್ಟ್ರೀಕರಣ ಮಾಡಲಿಲ್ಲ. ಅವುಗಳಿಗೆ ಸ್ಪೆಷಲ್ ಪರ್ಮಿಟ್ ಕೊಟ್ಟು ಅನೇಕ ಸಂದರ್ಭಗಳಲ್ಲಿ ಶಾಲಾ ಮಕ್ಕಳನ್ನೂ ಕರೆದುಕೊಂಡು ಹೋಗುವುದಕ್ಕೂ ಮತ್ತು ಮದುವೆ ಸಮಾರಂಭಗಳಲ್ಲಿ ಜನರನ್ನು ಕರೆದುಕೊಂಡು ಹೋಗುವುದಕ್ಕೂ ಅವನ್ನು ಉಪಯೋಗಿಸುತ್ತಿದ್ದಾರೆ. ಅಂತಹ ಅನೇಕ ಬಸ್ಸುಗಳಲ್ಲಿ ನುಮಾರು 6-8 ಬಸ್ಸುಗಳನ್ನು ಮಾತ್ರ ರಾಷ್ಟ್ರೀಕರಣಮಾಡಿದ್ದೀರಿ. ಇದು ತತ್ವಕ್ಕೆ ವಿರೋಧವಾಗಿದೆಯೆಂದು ನಾನು ಭಾವಿಸುತ್ತೇನೆ. ಮೋಟಾರ್ ವೆಹಿಕರ್ಸ್ ಆಕ್ಟ್‌ನಲ್ಲಿ ಕೆಲವು ಪ್ರಾವಿಷನ್ಸ್ ಇವೆ. ಆದರ ಪ್ರಕಾರ ಕೇವಲ ಎರಡು ಅಥವಾ ಮೂರು ಸ್ಟೇಟ್ ಕ್ಯಾರೇಜಸ್ ಈ ಒಂದು ಉದ್ದೇಶಕ್ಕೆ ಇಟ್ಟುಕೊಂಡರೆ ಸಾಕು, ಅಷ್ಟೊಂದು ಸ್ಟೇಟ್ ಕ್ಯಾರೇಜಸ್ ಬೇಕಿಫಿ ಒಂದು ವರ್ಷ, ಎರಡು ವರ್ಷಗಳು ಮಾತ್ರ ಸ್ಪೆಷಲ್ ಪರ್ಮಿಟ್ ಇರುವಂಥಾದ್ದನ್ನು ನೋಟಿಫಿಲ್ಲ ಕೇಷನ್ ನಲ್ಲಿ ಸೇರಿಸೀದ್ದೀರಿ. ಈ ಒಂದು ನ್ಯೂನತೆಯನ್ನು ನರಿಪಡಿಸುವುದು ಅವಶ್ಯಕತೆ ಇದೆ. ಏಕೆಂದರೆ ಮೊದಲನೆಯಾದಾಗಿ ಅದು ಸ್ಟೇಟ್ ಕ್ಯಾರೇಜ್. ಮತ್ತು ಕಾನೂನು ರೀತ್ಯ ಸ್ಟೇರಿಂಗ್ ಬಸ್ಸುಗಳನ್ನು ಇಡಬೇಕೆಂದಿದೆ. ಅದ್ದರಿಂದ ಕಾನೂನಿಗನುಗುಣವಾಗಿ ಇದ್ದರೂ ಸಹ ಸ್ಟೇರಿಂಗ್ ಬಸ್ಸುಗಳನ್ನು ಇಟ್ಟುಕೊಂಡಿರುವವರು ಒಂದು ವರ್ಷ, ಎರಡು ವರ್ಷಗಳ ಕಾಲವೇನಾದರೂ ಸ್ಪೆಷಲ್ ಪರ್ಮಿಟ್ ತೆಗೆದುಕೊಂಡರೆ ಅಂತಹ ಸಂದರ್ಭಗಳಲ್ಲಿ ಸ್ಟೇಟ್ ಕ್ಯಾರೇಜ್‌ಗಳನ್ನು ರಾಷ್ಟ್ರೀಕರಣ ಮಾಡದೇ ಇರುವ ಪಕ್ಷದಲ್ಲಿ ಅಂತಹ ಬಸ್ಸುಗಳನ್ನು ನೋಟಿಫಿಕೇಷನ್ನಿನಲ್ಲಿ ಸೇರಿಸಿರುವುದು ಸಾಧುವಾದುದಲ. ಇದು ಈಗ ತಂದಿರತಕ್ಕ ಮಸೂದೆಗೆ ನೇರವಾಗಿ ಸಂಬಂಧಪಡದೇ ಇದ್ದರೂ ಸಹ ಈಗಾಗಲೇ ಇದರ ಬಗ್ಗೆ ಒಂದು ಆರ್ಡಿನೆನ್ಸ್ ಬಂದಿರುವುದರಿಂದ ಅದಕ್ಕಾಗಿಯಾದರೂ ಒಂದು ತಿದ್ದುಪಡಿ ತರಬೇಕೆಂದು ಈ ಒಂದು ತಿದ್ದುಪಡಿ ಮಸೂದೆಯನ್ನು ಇವತ್ತು ಈ ಸಭೆಯಲ್ಲಿ ತಂದಿದ್ದಾರೆ. ಅದ್ದರಿಂದ ಈ ಮಸೂದೆಯನ್ನು ನಾನು ಮತ್ತೊಮ್ಮೆ ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†SRI MOHAMED ALI.—Madam Speaker, the question of exemption will be a reciprocal arrangement. Whatever tax we exempt, similarly all other States will exempt to the vehicles that are being registered in our State or vehicles that get permits from our State. Therefore this is in All India arrangement on reciprocal basis. We do not stand to lose anything; on the other hand, if a vehicle is permitted from other States to our State a nominal tax will be given to us. Therefore in the Statement of Objects and Reasons, we have not mentioned about the financial aspect because ultimately there will be no financial liability. They will pay the home tax, So far as vehicles that are registered in our State and which are going to get from our State. But vehicles coming from other States are concerned, they will give us additional tax. Secondly, in the wake of nationalisation of State Carriages, there seems to be likelihood of some disruption in the tourist traffic. Therefore instructions have been issued to the KSRTC to see that services are operated to the places of tourist importance on a very extensive basis so that the tourist in the State does not suffer. Mr. Byre Gowda has made out certain cases that the State Carriages have been nationalised but some of the Stage carriages also have been taken over by the Administrator etc., I don't want to go into the question because the matter is sub-judice. However, if any representation is there I will certainly ask the Law Department

to examine whether it is the intention of the ordinance to take over the Stage carriages. That has got to be examined. All the difficulties seems to be on account of the fact that the state carriages owners happens to secure special permits for temporary period. It is a matter that has got to be examined.

ಶ್ರೀ. ಸಿ. ಬೈರೇಗೌಡ.—ಅಧ್ಯಕ್ಷರೇ, ಕಾಂಟ್ರ್ಯಾಕ್ಟ್ ಕ್ಯಾರೇಜಸ್‌ನ್ನು ಮಾತ್ರ ರಾಷ್ಟ್ರೀಕರಣ ಮಾಡಬೇಕು ಎನ್ನುವುದು ಸರ್ಕಾರದವರು ಉದ್ದೇಶ. ಸ್ಟೇಟ್ ಕ್ಯಾರೇಜಸ್ ಬಸ್‌ಗಳು ಈಗಲೂ ಸಹ ಕೆಲವು ರೂಟ್ಸ್‌ಗಳಲ್ಲಿ ಓಡಾಡುತ್ತಿವೆ. ಆದುದರಿಂದ ಸರ್ಕಾರದವರ ಉದ್ದೇಶವೇ ಏಂದರೆ ಕಾಂಟ್ರ್ಯಾಕ್ಟ್ ಕ್ಯಾರೇಜಸ್ ಬಸ್‌ಗಳನ್ನು ಮಾತ್ರ ತೆಗೆದುಕೊಳ್ಳಬೇಕೆಂದಿರುವುದರಿಂದ, ಸ್ಟೇಟ್ ಕ್ಯಾರೇಜಸ್‌ಗಳನ್ನು ಸಹ ರಾಷ್ಟ್ರೀಕರಣ ಮಾಡಿಲ್ಲ ಎನ್ನುವ ಬಗ್ಗೆ ಸರ್ಕಾರದವರು ಒಂದು ನೋಟಿಫಿಕೇಷನ್ ಹೊರಡಿಸಬೇಕು. ತಾವು ಅದನ್ನೂ ಕೂಡ ನ್ಯಾಶನರ್‌ಲೈಜ್ ಮಾಡುವ ಹಾಗಿದ್ದರೆ ಮಾಡಿ ಬೇಡ ಎನ್ನುವುದಿಲ್ಲ.

SRI M. MOHAMED ALI.—Under the ordinance it is not only the contract carriages but all the carriages covered by special permits have been nationalised. The legal aspects of the stage carriages have to be examined.

MADAM SPEAKER.—I will put the consideration motion to the vote of the House. The question is :

> "That the Karnataka Motor Vehicles (Taxation on Passengers and Goods) (Amendment) Bill 1976 be taken into consideration."

The motion was adopted

CLAUSE 2 and 3

MADAM SPEAKER —The question is: both inclusieve.

"That clause 2 and 3/do stand part of the Bill"

The motion was adopted

clause 2 and 3 both inclusive were added to the Bill.

CLAUSE 1 etc.,

MADAM SPEAKER.—The question is :

' That Clause 1, the long Title and the Preamble and the Enacting formulae do stand part of the Bill"

The motion was adopted

clause 1, the long Title and the Preamble and the Enacting formula were added to the bill.

Motion to Pass

Sri M. MOHAMED ALI —Madam I beg to move :

"That the Karnataka Motor Vehicles (Taxation on Passengers and Goods) (Amendment) Bill 1976 be passed."

MADAM SPEAKER.—The question is :

"That the Karnataka Motor Vehicles (Taxation on Passengers and Goods) (Amendment) Bill 1976 be passed."

The motion was adopted and Bill was passed.

THE KARNATAKA FOREST (AMENDMENT) BILL 1976

Motion to Consider

SRI C.N. PATIL.—(Minister for Forests) : I beg to move :

"That the Karnataka Forest (Amendment) Bill 1976 be taken into consideration."

MADAM SPEAKER.—Motion moved.

"That the Karnataka Forest (Amendment) Bill 1976 be taken into consideration."

ಶ್ರೀ ಸಿ.ಎನ್. ಪಾಟೀಲ್.—ಮಾನ್ಯ ಅಧ್ಯಕ್ಷಣಿಯವರೇ, ಈ 1976 ನೇ ಕರ್ನಾಟಕ ರಾಜ್ಯದ ಅರಣ್ಯಕ್ಕೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕರ ಉದ್ದೇಶವೇನಿದೆ ಎಂದರೆ, ಅರಣ್ಯ ದಿಂದ ಬರತಕ್ಕ ವಿವಿಧವಾದ ಉತ್ಪನ್ನಗಳ ಮೇಲೆ ಶೇಕಡ 5ರಷ್ಟು ಟ್ಯಾಕ್ಸ್‌ನ್ನು ಹಾಕಿ ಅದರಿಂದ ಬರತಕ್ಕ ಹಣದಿಂದ ಪ್ಲಾಂಟೇಷನ್ ಮತ್ತು ಪ್ರೊಟೆಕ್ಷನ್‌ಗೆ ಉಪಯೋಗಿಸುವುದಕ್ಕೋಸ್ಕರ ಈ ತಿದ್ದು ಪಡಿಯನ್ನು ತಂದದ್ದು ಆಗಿದೆ.

ರಾಷ್ಟ್ರೀಯ ಸರಾಸರಿಯನ್ನು ತೆಗೆದುಕೊಂಡರೆ ಅರಣ್ಯ ಶೇಕಡ 23 ಇವೆ. ನಮ್ಮ ರಾಜ್ಯದಲ್ಲಿ ಶೇಕಡ 15.2 ಅರಣ್ಯವಿದೆ ಎಕ್ಸ್‌ಪ್ಲಾಂಟೇಷನ್ ಆಫ್ ಟಿಂಬರ್ ಈ ವರ್ಷಕ್ಕೆ ಅಗುತ್ತಾ ಇರತಕ್ಕಂಥದು 1.18 ಮಿಲಿಯನ್ ಸಿ.ಎಂ.ಟಿ. ಪರ್ ಆನಂ. ಪ್ಯೂರ್ ವುಡ್ 211.11 ಮಿಲಿಯನ್ ಸಿ.ಎಂ.ಟಿ. ಇನ್ನು 10-20 ವರ್ಷಗಳ ನಂತರ 1.18 ಮಿಲಿಯನ್‌ನಿಂದ ಸುಮಾರು 3 ಮಿಲಿಯನ್ ವರೆಗೆ ಏರಬಹುದು ಮತ್ತೆ ಉರುವಲು 211.11 ಮಿಲಿಯನ್ ಸಿ.ಎಂ.ಟಿನಿಂದ ಸುಮಾರು 4 ಮಿಲಿಯನ್‌ವರೆಗೆ ಏರಬಹುದು ಎನ್ನುವ ಅಂದಾಜು ಇದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ—ಈಗ ನಮಗೆ ಮತ್ತೆ ಏನು ಕರಭಾರ ಹಾಕುತ್ತಿದ್ದಿರಿ ಸ್ವಾಮಿ ?

ಶ್ರೀ ಸಿ.ಎನ್. ಪಾಟೀಲ್.—ಶೇಕಡ 5 ಟ್ಯಾಕ್ಸನ್ನು ಏತಕ್ಕೆ ಹಾಕುತ್ತಿದ್ದೇವೆ, ಅದರ ಉದ್ದೇಶ ವೇನು ಏನ್ನುವುದನ್ನು ಹೇಳುತ್ತಿದೆ. ಈಗ ಬರತಕ್ಕಂಥ ಹಣದಿಂದ ಪ್ಲಾಂಟೇಷನ್ ಮತ್ತು ಪ್ರೊಟೆಕ್ಷನ್‌ಗೆ ಸಾಕಾಗುತ್ತಿರಲಿಲ್ಲವಾದುದರಿಂದ ನಾವು ಈ 5 ಪರ್ಸೆಂಟ್ ಟ್ಯಾಕ್ಸ್‌ನ್ನು ಹಾಕುತ್ತಿದ್ದೇವೆ. ಈಗ ಇದಕ್ಕೆ ಕೇವಲ ಒಂದೂವರೆ ಕೋಟಿ ರೂಪಾಯಿ ಮಾತ್ರ ಉಪಯೋಗ ಮಾಡುತ್ತಿದ್ದೇವೆ. ಇನ್ನು 10-20 ವರ್ಷಗಳ ನಂತರ ಜನತೆಗೆ ಅವಶ್ಯಕವಾದಂಥ ಟಿಂಬರ್ ಆಗಲೀ ಮತ್ತೊಂದು ಆಗಲಿ ದೊರಯದೇ ಹೋಗಬಹುದಾದಂತ ಸಂದರ್ಭ ಬರಬಹುದೆನ್ನುವ ದೃಷ್ಟಿಯಿಂದ ನಾವು ಪ್ಲಾಂಟೇಷನ್ ಮತ್ತು ಪ್ರೊಟೆಕ್ಷನ್ ಪ್ರೊಗ್ರಾಂನ್ನು ಹಾಕಿಕೊಂಡಿದ್ದೇವೆ. ಈಗ ಸುಮಾರು 30 ಕೋಟಿ ರೂಪಾಯಿಗಳ ಉತ್ಪನ್ನ ಅರಣ್ಯದಿಂದ ಸ್ಪೋಟ್ ಎಕ್ಸಚಕರ್‌ಗೆ ಬರುತ್ತಿದೆ;